## ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ, ಮೈಸೂರು ತಾಲ್ಲೂಕು

# ಸೇತು ಬಂಧ ಶಿಕ್ಷಣ

# (Bridge Course)

# ಕ್ರಿಯಾ ಯೋಜನೆ



**ಶೈಕ್ಷಣಿಕ ವರ್ಷ 2016–17**

## ಪ್ರಥಮ ಭಾಷೆ ಕನ್ನಡ

## 8, 9 ಮತ್ತು 10 ನೆಯ ತರತಿಗಳು

**ರವೀಶ್ ಕುಮಾರ್ ಬಿ.**

**ಕನ್ನಡ ಭಾಷಾ ಶಿಕ್ಷಕರು**

**ಸೇತುಬಂಧ ಶಿಕ್ಷಣ**

**ಕ್ರಿಯಾ ಯೋಜನೆ**

**(8, 9 ಮತ್ತು 10 ನೆಯ ತರಗತಿ)**

| ಕ್ರಮ ಸಂಖ್ಯೆ | ಯೋಜನಾ ಕಾರ್ಯ | ಯೋಜನೆಗೆ ರೂಪಿಸಿಕೊಂಡ ಚಟುವಟಿಕೆಗಳು | ಅನುಷ್ಠಾನ |
|---|---|---|---|
| 1 | ಕಲಿಕಾಂಶ / ಸಾಮರ್ಥ್ಯಗಳ ಪಟ್ಟಿ ತಯಾರಿಕೆ | * ಹಿಂದಿನ ತರಗತಿಗಳಲ್ಲಿ ಗಳಿಸಿರಲೇ ಬೇಕಾದ ಹಾಗೂ ಮುಂದಿನ ತರಗತಿಗೆ ಮುಂದುವರಿದಿರುವ ಕಲಿಕಾಂಶ / ಸಾಮರ್ಥ್ಯಗಳನ್ನು ಗುರಿತಿಸಿಕೊಳ್ಳುವುದು.<br>* ಗುರುತಿಸಿಕೊಂಡ ಕಲಿಕಾಂಶ / ಸಾಮರ್ಥ್ಯಗಳನ್ನು ಸಮನ್ವಯಗೊಳಿಸಿಕೊಂಡು ಶ್ರೇಣೀಕೃತವಾಗಿ ಜೋಡಿಸಿ ಕಲಿಕಾಂಶಗಳ ಪಟ್ಟಿ ತಯಾರಿಸಿ ಕೊಳ್ಳುವುದು. | * ಮೇ ತಿಂಗಳ ಕೊನೆಯ ವಾರ.<br>* ವಿಷಯ ಶಿಕ್ಷಕರು. |
| 2 | ನೈದಾನಿಕ / ಪೂರ್ವ ಪರೀಕ್ಷೆ | * ಕಲಿಕಾಂಶಗಳನ್ನು ಆಧರಿಸಿ ಪ್ರಶ್ನೆ ಪತ್ರಿಕೆ ತಯಾರಿಕೆ.<br>* ಮಾದರಿ ಉತ್ತರ ಕೀಲಿ ರಚನೆ.<br>* ನಿಗದಿತ ಸಮಯದಲ್ಲಿ ಪರೀಕ್ಷೆಯನ್ನು ನಡೆಸುವುದು.<br>* ಉತ್ತರ ಪತ್ರಿಕೆಗಳ ಮೌಲ್ಯಮಾಪನ.<br>* ಉತ್ತರ ಪತ್ರಿಕೆಗಳ ವಿಶ್ಲೇಷಣೆ,<br>* ಕಡಿಮೆ ಸಾಧನೆ ತೋರಿದ ಕಲಿಕಾಂಶ / ಸಾಮರ್ಥ್ಯಗಳನ್ನು ಗುರುತಿಸುವುದು.<br>* ಕಡಿಮೆ ಸಾಧನೆಯನ್ನು ತೋರಿದ ವಿದ್ಯಾರ್ಥಿಗಳನ್ನು ಗುರುತಿಸುವುದು. | * ಜೂನ್ ತಿಂಗಳ ಮೊದಲ ವಾರ.<br>* ಎರಡು ಅವಧಿಗಳು<br>* ಮುಖ್ಯ ಶಿಕ್ಷಕರು<br>* ವಿಷಯ ಶಿಕ್ಷಕರು<br>* ವಿದ್ಯಾರ್ಥಿಗಳು |
| 3 | ಪರಿಹಾರ ಬೋಧನೆ | * ಕಡಿಮೆ ಸಾಧನೆ ತೋರಿದ ಕಲಿಕಾಂಶ / ಸಾಮರ್ಥ್ಯಗಳಿಗೆ ಪರಿಹಾರೋಪಾಯಗಳನ್ನು ಗುರುತಿಸಿ ಕೊಂಡು ಯೋಜನೆಯನ್ನು ತಯಾರಿಸಿ ಕೊಳ್ಳುವುದು.<br>* ಯೋಜನೆಗೆ ಅನುಗುಣವಾದ ಚಟುವಟಿಕೆಗಳನ್ನು ರೂಪಿಸಿಕೊಳ್ಳುವುದು.<br>* ಚಟುವಟಿಕೆಗಳಿಗೆ ಬೇಕಾದ ಕಲಿಕಾ ಸಹಾಯಕಗಳನ್ನು ಸಿದ್ಧಪಡಿಸಿಕೊಳ್ಳುವುದು.<br>* ನಿಗದಿತ ಅವಧಿಯಲ್ಲಿ ಪರಿಹಾರ ಬೋಧನೆಯನ್ನು ಮಾಡುವುದು. | * ಜೂನ್ ತಿಂಗಳ ಮೊದಲ ಮತ್ತು ಎರಡನೆಯ ವಾರ.<br>* ಹತ್ತು ಅವಧಿಗಳು<br>* ಮುಖ್ಯ ಶಿಕ್ಷಕರು<br>* ವಿಷಯ ಶಿಕ್ಷಕರು<br>* ವಿದ್ಯಾರ್ಥಿಗಳು |
| 4 | ಸಾಫಲ್ಯ ಪರೀಕ್ಷೆ | * ನೈದಾನಿಕ ಪರೀಕ್ಷೆಯ ಮಾದರಿಯಲ್ಲಿಯೇ ಪ್ರಶ್ನೆ ಪತ್ರಿಕೆಯನ್ನು ತಯಾರಿಸಿಕೊಳ್ಳುವುದು.<br>* ಕಲಿಕಾಂಶ / ಪ್ರಶ್ನೆಗಳ ಕ್ರಮಾಂಕಗಳಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.<br>* ಮಾದರಿ ಉತ್ತರ ಕೀಲಿ ರಚನೆ.<br>* ನಿಗದಿತ ಸಮಯದಲ್ಲಿ ಪರೀಕ್ಷೆಯನ್ನು ನಡೆಸುವುದು. | * ಜೂನ್ ತಿಂಗಳ ಎರಡನೆಯ ವಾರದ ಕೊನೆಯಲ್ಲಿ.<br>* ಎರಡು ಅವಧಿಗಳು |

| | | | |
|---|---|---|---|
| | | * ಉತ್ತರ ಪತ್ರಿಕೆಗಳ ಮೌಲ್ಯಮಾಪನ.<br>* ಉತ್ತರ ಪತ್ರಿಕೆಗಳ ವಿಶ್ಲೇಷಣೆ,<br>* ಕಡಿಮೆ ಸಾಧನೆ ತೋರಿದ ಕಲಿಕಾಂಶ / ಸಾಮರ್ಥ್ಯಗಳನ್ನು ಗುರುತಿಸುವುದು.<br>* ಕಡಿಮೆ ಸಾಧನೆಯನ್ನು ತೋರಿದ ವಿದ್ಯಾರ್ಥಿಗಳನ್ನು ಗುರುತಿಸುವುದು. | * ಮುಖ್ಯ ಶಿಕ್ಷಕರು<br>* ವಿಷಯ ಶಿಕ್ಷಕರು<br>* ವಿದ್ಯಾರ್ಥಿಗಳು |
| 5 | ಕಲಿಕಾ ಗುಂಪುಗಳ ರಚನೆ | * ಸಾಫಲ್ಯ ಪರೀಕ್ಷೆಯ ಫಲಿತಾಂಶದ ಆಧಾರದಿಂದ ವಿದ್ಯಾರ್ಥಿಗಳ ಕಲಿಕಾ ಗುಂಪುಗಳನ್ನು ರಚಿಸುವುದು.<br>* ವಿದ್ಯಾರ್ಥಿಗಳನ್ನು –<br>– ಸರಾಸರಿಗಿಂತ ಹೆಚ್ಚಿನ ಸಾಧನೆಯನ್ನು ತೋರಿದವರು.<br>– ಸರಾಸರಿ ಸಾಧನೆಯನ್ನು ತೋರಿದವರು.<br>– ಸರಾಸರಿಗಿಂತ ಕಡಿಮೆ ಸಾಧನೆಯನ್ನು ತೋರಿದವರು.<br>ಹೀಗೆ ಮೂರು ಗುಂಪುಗಳನ್ನಾಗಿ ಮಾಡಿಕೊಳ್ಳುವುದು.<br>* ಪ್ರತಿ ಗುಂಪಿನಿಂದ ಕನಿಷ್ಠ ಇಬ್ಬರು ವಿದ್ಯಾರ್ಥಿಗಳು ಇರುವಂತೆ ಗುಂಪುಗಳನ್ನು ರಚಿಸುವುದು.<br>* ಸರಾಸರಿಗಿಂತ ಹೆಚ್ಚಿನ ಸಾಧನೆಯನ್ನು ತೋರಿದ ವಿದ್ಯಾರ್ಥಿಯನ್ನು ಗುಂಪಿನ ನಾಯಕನನ್ನಾಗಿ ಮಾಡುವುದು. | * ಜೂನ್ ತಿಂಗಳ ಮೂರನೆಯ ವಾರ.<br>* ಹತ್ತು ಅವಧಿಗಳು<br>* ಮುಖ್ಯ ಶಿಕ್ಷಕರು<br>* ವಿಷಯ ಶಿಕ್ಷಕರು<br>* ವಿದ್ಯಾರ್ಥಿಗಳು |
| 6 | ಪೂರಕ ಬೋಧನೆ | * ಸಾಫಲ್ಯ ಪರೀಕ್ಷೆ ಫಲಿತಾಂಶದ ಆಧಾರದಿಂದ ಪೂರಕ ಬೋಧನೆಗೆ ಯೋಜನೆಯನ್ನು ರೂಪಿಸಿಕೊಳ್ಳಬೇಕು.<br>* ಸಾಮರ್ಥ್ಯವನ್ನು ಗಳಿಸದ ವಿದ್ಯಾರ್ಥಿಗಳ ಪಟ್ಟಿ ತಯಾರಿಸುವುದು.<br>* ಹೆಚ್ಚು ಕೊರತೆ / ದೋಷಗಳನ್ನು ಹೊಂದಿರುವ ಸಾಮರ್ಥ್ಯಗಳನ್ನು ಗುರುತಿಸಿಕೊಳ್ಳಬೇಕು.<br>* ಶಾಲೆಯ ಅವಧಿಯ ಮೊದಲ ಇಲ್ಲವೇ ನಂತರದ ಕೊನೆಯ ಅವಧಿಯಲ್ಲಿ ಪರಿಹಾರ ಬೋಧನೆಯನ್ನು ಮಾಡುವುದು.<br>* ಪೂರಕ ಬೋಧನೆಗೆ ಪರಿಹಾರ ಬೋಧನೆಯ ಯೋಜನೆಯನ್ನೇ ಬಳಸಿಕೊಳ್ಳಬಹುದು. ಆದರೆ ಹೆಚ್ಚಿನ ಚಟುವಟಿಕೆಗಳನ್ನು ರೂಪಿಸಿಕೊಳ್ಳುವುದು.<br>* ಸರಣಿ ಪರೀಕ್ಷೆಗಳನ್ನು ನಡೆಸುವುದು.<br>* ಕಲಿಕಾ ಕೊರತೆ / ದೋಷ ನೀಗುವವರೆಗೂ ಪ್ರಕ್ರಿಯೆ ಮುಂದುವರಿಸುವುದು.<br>* ತೀವ್ರತರ ಕಲಿಕಾ ಕೊರತೆ / ದೋಷಗಳಿದ್ದರೆ ಕ್ರಿಯಾ ಸಂಶೋಧನೆಯನ್ನು ನಡೆಸುವುದು. | * ನಿರಂತರವಾಗಿ ಡಿಸೆಂಬರ್ ಅಂತ್ಯದ ವರೆಗೆ ನಡೆಸುವುದು.<br>* ಮುಖ್ಯ ಶಿಕ್ಷಕರು<br>* ವಿಷಯ ಶಿಕ್ಷಕರು<br>* ವಿದ್ಯಾರ್ಥಿಗಳು |

* * * *

## ಸೇತುಬಂಧ ಶಿಕ್ಷಣ

**ತರಗತಿ : 8 ನೆಯ ತರಗತಿ** **ವಿಷಯ : ಪ್ರಥಮ ಭಾಷೆ ಕನ್ನಡ**

### ಕಲಿಕಾಂಶಗಳ / ಸಾಮರ್ಥ್ಯಗಳ ಪಟ್ಟಿ

**ಕಲಿಕಾ ಸಾಮಗ್ರಿ : 7 ನೆಯ ತರಗತಿ ಪಠ್ಯಪುಸ್ತಕ ಮತ್ತು ವ್ಯಾಕರಣಾಂಶಗಳ ತೂಗುಪಟ**

| ಕ್ರಮ ಸಂಖ್ಯೆ | ಕಲಿಕಾಂಶಗಳ / ಸಾಮರ್ಥ್ಯಗಳ ವಿವರ | ಸಾಮರ್ಥ್ಯ ಪರೀಕ್ಷೆಗಾಗಿ ರೂಪಿಸಿಕೊಂಡ ಚಟುವಟಿಕೆಗಳು | ಬೇಕಾದ ಅವಧಿಗಳು |
|---|---|---|---|
| 1 | ನಾಣ್ಣುಡಿ, ಪದಪುಂಜ, ನುಡಿಗಟ್ಟು, ಸೌಮ್ಯೋಕ್ತಿಗಳನ್ನು ಬಳಸಿಕೊಂಡು ಮಾತನ್ನು ಕಲಾತ್ಮಕಗೊಳಿಸುವುದು. | ನಾಣ್ಣುಡಿ, ಪದಪುಂಜ, ನುಡಿಗಟ್ಟು, ಸೌಮ್ಯೋಕ್ತಿಗಳನ್ನು ಒಳಗೊಂಡ ಪದಗಳನ್ನು ನೀಡಿ, ಮಾತಿನಲ್ಲಿ ಬಳಸುವಂತೆ ಹೇಳಿ, ಅಭ್ಯಾಸ ಮಾಡಿಸುವುದು. | 02 |
| 2 | ಓದಿದ ವಿಷಯ ವಿಚಾರಗಳ ಬಗೆಗೆ ಆಲೋಚಿಸಿ ತಾರ್ಕಿಕ ನಿಲುವನ್ನು ಪಡೆದು ತೀರ್ಮಾನಕ್ಕೆ ಬರುವ ಸಾಮರ್ಥ್ಯವನ್ನು ರೂಢಿಸಿಕೊಳ್ಳುವುದು. | ಗದ್ಯ ಸಾಹಿತ್ಯ ಪ್ರಕಾರಗಳನ್ನು ನೀಡಿ ಓದಿ, ಅರ್ಥೈಸಿಕೊಂಡು ಕೇಳಿದ ಪ್ರಶ್ನೆಗಳಿಗೆ ಉತ್ತರ ಬರೆಯುವಂತೆ ಹೇಳಿ, ಅಭ್ಯಾಸ ಮಾಡಿಸುವುದು. | 04 |
| 3 | ವಿಶಿಷ್ಟ ಪದಪುಂಜಗಳ ವಿವರಣೆ, ಹೊಸ ಪರಿಕಲ್ಪನೆ, ಸಮಾನಾರ್ಥಕ, ಭಿನ್ನಾರ್ಥಕ, ಅನೇಕಾರ್ಥಕ, ಪದಗಳನ್ನು ಗ್ರಹಿಸಿ ಸ್ವತಂತ್ರವಾಗಿ ವಾಕ್ಯಗಳಲ್ಲಿ ಬಳಸುವ ಸಾಮರ್ಥ್ಯವನ್ನು ಹೆಚ್ಚಿಸುವುದು. | ವಿಶಿಷ್ಟ ಪದಪುಂಜಗಳ ವಿವರಣೆ, ಹೊಸ ಪರಿಕಲ್ಪನೆ, ಸಮಾನಾರ್ಥಕ, ಭಿನ್ನಾರ್ಥಕ, ಅನೇಕಾರ್ಥಕ, ಪದಗಳನ್ನು ನೀಡಿ, ಅವುಗಳ ಅರ್ಥ ತಿಳಿದು, ಸ್ವಂತವಾಕ್ಯಗಳಲ್ಲಿ ಬಳಸುವಂತೆ ಹೇಳಿ, ಅಭ್ಯಾಸ ಮಾಡಿಸುವುದು. | 04 |
| 4 | ವಿಶಿಷ್ಟ ಪದಪ್ರಯೋಗಗಳ ಧ್ವನಿ, ಸಾಮ್ಯ ಧ್ವನಿಗಳನ್ನು ವರ್ಗೀಕರಿಸಿ, ನಿರ್ಣಯಿಸಿ, ಓದಿಕೊಂಡು ಬರೆವಣಿಗೆಯಲ್ಲಿ ಬಳಸುವುದು. | ವಿಶಿಷ್ಟ ಪದಪ್ರಯೋಗಗಳ ಧ್ವನಿ, ಸಾಮ್ಯ ಧ್ವನಿಗಳನ್ನು ಪದಗಳನ್ನು ನೀಡಿ, ಅರ್ಥವ್ಯತ್ಯಾಸವನ್ನು ತಿಳಿಸಿ, ಸ್ವಂತವಾಕ್ಯಗಳಲ್ಲಿ ಬಳಸುವಂತೆ ಹೇಳಿ, ಅಭ್ಯಾಸ ಮಾಡಿಸುವುದು. | 04 |
| 5 | ಓದಿದ ಅಥವಾ ಮಾತಿನಲ್ಲಿರುವ ಭಾಷಾ ಸ್ವರಭಾರ ಮತ್ತು ಸೂಕ್ತ ಲೇಖನ ಚಿಹ್ನೆಗಳನ್ನು ಬರಹಕ್ಕೆ ಇಳಿಸುವ ಸಾಮರ್ಥ್ಯವನ್ನು ಹೆಚ್ಚಿಸುವುದು. | ಅನೇಕ ವಾಕ್ಯಗಳನ್ನು ನೀಡಿ ಸೂಕ್ತ ಲೇಖನ ಚಿಹ್ನೆಗಳನ್ನು ಹಾಕಿ ಬರೆಯುವಂತೆ ಹೇಳಿ, ಅಭ್ಯಾಸ ಮಾಡಿಸುವುದು. | 02 |
| 6 | ಛಂದೋನಿಯಮಗಳನ್ನು ಅನುಸರಿಸಿ ಕವಿತೆಗಳಲ್ಲಿರುವ ಲಘು–ಗುರುಗಳನ್ನು ನಿರ್ಣಯಿಸಿ, ಗಣ ವಿಭಾಗಿಸಿ, ಪಾದಗಳನ್ನು ನಿಶ್ಚಿತವಾಗಿ ತಿಳಿಯುವ ಸಾಮರ್ಥ್ಯವನ್ನು ಪಡೆಯುವುದು. | ಪದ್ಯಭಾಗಗಳನ್ನು ನೀಡಿ. ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯುಂತೆ ಹೇಳಿ, ಅಭ್ಯಾಸ ಮಾಡಿಸುವುದು. | 04 |
| | | | 20 |

**ಸೇತುಬಂಧ ಶಿಕ್ಷಣ**

**ತರಗತಿ : 9 ನೆಯ ತರಗತಿ** **ವಿಷಯ : ಪ್ರಥಮ ಭಾಷೆ ಕನ್ನಡ**

**ಕಲಿಕಾಂಶಗಳ / ಸಾಮರ್ಥ್ಯಗಳ ಪಟ್ಟಿ**

**ಕಲಿಕಾ ಸಾಮಗ್ರಿ : 8 ನೆಯ ತರಗತಿ ಪಠ್ಯಪುಸ್ತಕ ಮತ್ತು ವ್ಯಾಕರಣಾಂಶಗಳ ತೂಗುಪಟ**

| ಕ್ರಮ ಸಂಖ್ಯೆ | ಕಲಿಕಾಂಶಗಳ / ಸಾಮರ್ಥ್ಯಗಳ ವಿವರ | ಸಾಮರ್ಥ್ಯ ಪರೀಕ್ಷೆಗಾಗಿ ರೂಪಿಸಿಕೊಂಡ ಚಟುವಟಿಕೆಗಳು | ಬೇಕಾದ ಅವಧಿಗಳು |
|---|---|---|---|
| 1 | ಸಂಯುಕ್ತಾಕ್ಷರಗಳು ಮತ್ತು ಪರಿಚಿತ ಪದಗಳ ಉಕ್ತಲೇಖನ ತೆಗೆದುಕೊಳ್ಳುವುದು. | * ಸಂಯುಕ್ತಾಕ್ಷರಗಳು ಮತ್ತು ಪರಿಚಿತ ಪದಗಳ ಉಕ್ತಲೇಖನ ಬರೆಸುವುದು.<br>* ಅಭ್ಯಾಸ ಮಾಡಿಸುವುದು. | 4 |
| 2 | ಕವನ, ಕಾವ್ಯ, ಲಘು ಪ್ರಬಂಧ, ಕಥೆ ಮುಂತಾದ ಸಾಹಿತ್ಯ ಪ್ರಕಾರಗಳನ್ನು ಓದಿ ಅರ್ಥಮಾಡಿಕೊಳ್ಳುವುದರೊಂದಿಗೆ ಅವುಗಳ ಬಗ್ಗೆ ಮೌಖಿಕವಾಗಿ ಮತ್ತು ಲಿಖಿತ ರೂಪದಲ್ಲಿ ಅಭಿಪ್ರಾಯ ವ್ಯಕ್ತಪಡಿಸುವುದು. | * ಗದ್ಯ ಸಾಹಿತ್ಯ ಪ್ರಕಾರಗಳನ್ನು ನೀಡಿ. ಓದಿ ಅರ್ಥೈಸಿಕೊಂಡು. ಕೇಳಿದ ಪ್ರಶ್ನೆಗಳಿಗೆ ಉತ್ತರ ಬರೆಯುವಂತೆ ಹೇಳಿ, ಅಭ್ಯಾಸ ಮಾಡಿಸುವುದು | 6 |
| 3 | ಪದ್ಯಗಳನ್ನು ಓದಿ ಅವುಗಳ ಸಾರಾಂಶಗಳನ್ನು ಅರ್ಥ ಮಾಡಿಕೊಳ್ಳುವ ಮತ್ತು ವಿವರಿಸುವ ಸಾಮರ್ಥ್ಯ ಹೊಂದುವುದು | * ಪದ್ಯದ ಚರಣಗಳನ್ನು ನೀಡಿ, ಅದನ್ನು ಓದಿಕೊಂಡು, ಅದರ ಸಾರಾಂಶವನ್ನು ಸ್ವಂತವಾಕ್ಯಗಳಲ್ಲಿ ಬರೆಯುವಂತೆ ಹೇಳಿ, ಅಭ್ಯಾಸ ಮಾಡಿಸುವುದು. | 5 |
| 4 | ಸರಳ ವ್ಯಾಕರಣಾಂಶಗಳನ್ನು ಅರ್ಥಮಾಡಿಕೊಳ್ಳುವುದರೊಂದಿಗೆ ಛಂದಸ್ಸಿನ ಪರಿಚಯ ಮಾಡಿಕೊಳ್ಳುವುದು. | * ಸರಳ ವ್ಯಾಕರಣಾಂಶಗಳನ್ನು ನೀಡಿ, ಅವುಗಳಲ್ಲಿರುವ ವ್ಯಾಕರಣಾಂಶವನ್ನು ತಿಳಿಸುವಂತೆ ಹೇಳಿ, ಅಭ್ಯಾಸ ಮಾಡಿಸುವುದು.<br>* ಪದ್ಯಭಾಗಗಳನ್ನು ನೀಡಿ. ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯುಂತೆ ಹೇಳಿ, ಅಭ್ಯಾಸ ಮಾಡಿಸುವುದು. | 5 |
| | | | 20 |

## ಸೇತುಬಂಧ ಶಿಕ್ಷಣ

**ತರಗತಿ : 10 ನೆಯ ತರಗತಿ** **ವಿಷಯ : ಪ್ರಥಮ ಭಾಷೆ ಕನ್ನಡ**

### ಕಲಿಕಾಂಶಗಳ / ಸಾಮರ್ಥ್ಯಗಳ ಪಟ್ಟಿ

**ಕಲಿಕಾ ಸಾಮಗ್ರಿ : 9 ನೆಯ ತರಗತಿ ಪಠ್ಯಪುಸ್ತಕ ಮತ್ತು ವ್ಯಾಕರಣಾಂಶಗಳ ತೂಗುಪಟ**

| ಕ್ರಮ ಸಂಖ್ಯೆ | ಕಲಿಕಾಂಶಗಳ / ಸಾಮರ್ಥ್ಯಗಳ ವಿವರ | ಸಾಮರ್ಥ್ಯ ಪರೀಕ್ಷೆಗಾಗಿ ರೂಪಿಸಿಕೊಂಡ ಚಟುವಟಿಕೆಗಳು | ಬೇಕಾದ ಅವಧಿಗಳು |
|---|---|---|---|
| 1 | ಸಂಯುಕ್ತಾಕ್ಷರಗಳು, ಲೇಖನ ಚಿಹ್ನೆಗಳನ್ನು ಒಳಗೊಂಡಂತೆ ಪರಿಚಿತ ಮತ್ತು ಅಪರಿಚಿತ ಪದಗಳ ಉಕ್ತಲೇಖನ ತೆಗೆದು ಕೊಳ್ಳುವುದು. | * ಸಂಯುಕ್ತಾಕ್ಷರಗಳು, ಲೇಖನ ಚಿಹ್ನೆಗಳನ್ನು ಒಳಗೊಂಡಂತೆ ಪರಿಚಿತ ಮತ್ತು ಅಪರಿಚಿತ ಪದಗಳ ಉಕ್ತಲೇಖನ ಬರೆಸುವುದು.<br>* ಅಭ್ಯಾಸ ಮಾಡಿಸುವುದು. | 4 |
| 2 | ಕವನ, ಕಾವ್ಯ, ಲಘು ಪ್ರಬಂಧ, ಕಥೆ ಮುಂತಾದ ಸಾಹಿತ್ಯದ ಪ್ರಕಾರಗಳನ್ನು ಓದಿ, ಅರ್ಥಮಾಡಿಕೊಳ್ಳುವುದರೊಂದಿಗೆ ಅವುಗಳ ಬಗ್ಗೆ ಮೌಖಿಕವಾಗಿ ಮತ್ತು ಲಿಖಿತರೂಪದಲ್ಲಿ ಅಭಿಪ್ರಾಯ ವ್ಯಕ್ತಪಡಿಸುವುದು. | * ಗದ್ಯ ಸಾಹಿತ್ಯ ಪ್ರಕಾರಗಳನ್ನು ನೀಡಿ. ಓದಿ ಅರ್ಥೈಸಿಕೊಂಡು. ಕೇಳಿದ ಪ್ರಶ್ನೆಗಳಿಗೆ ಉತ್ತರ ಬರೆಯುವಂತೆ ಹೇಳಿ, ಅಭ್ಯಾಸ ಮಾಡಿಸುವುದು | 6 |
| 3 | ಹಳಗನ್ನಡ ಪದ್ಯಗಳನ್ನು ಓದಿ ಅವುಗಳ ಸಾರಾಂಶವನ್ನು ಅರ್ಥಮಾಡಿಕೊಳ್ಳುವ ಮತ್ತು ವಿವರಿಸುವ ಸಾಮರ್ಥ್ಯ ಹೊಂದುವುದು. | * ಹಳಗನ್ನಡ ಪದ್ಯದ ಚರಣಗಳನ್ನು ನೀಡಿ, ಅದನ್ನು ಓದಿಕೊಂಡು, ಅದರ ಸಾರಾಂಶವನ್ನು ಸ್ವಂತವಾಕ್ಯಗಳಲ್ಲಿ ಬರೆಯುವಂತೆ ಹೇಳಿ, ಅಭ್ಯಾಸ ಮಾಡಿಸುವುದು. | 5 |
| 4 | ಸರಳವ್ಯಾಕರಣಾಂಶಗಳನ್ನು ಅರ್ಥಮಾಡಿ ಕೊಳ್ಳುವುದರೊಂದಿಗೆ ಛಂದಸ್ಸಿನ ಪರಿಚಯ ಮಾಡಿಕೊಳ್ಳುವುದು. | * ಸರಳ ವ್ಯಾಕರಣಾಂಶಗಳನ್ನು ನೀಡಿ, ಅವುಗಳಲ್ಲಿರುವ ವ್ಯಾಕರಣಾಂಶವನ್ನು ತಿಳಿಸುವಂತೆ ಹೇಳಿ, ಅಭ್ಯಾಸ ಮಾಡಿಸುವುದು.<br>* ಪದ್ಯಭಾಗಗಳನ್ನು ನೀಡಿ. ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯುಂತೆ ಹೇಳಿ, ಅಭ್ಯಾಸ ಮಾಡಿಸುವುದು. | 5 |
| | | | 20 |